ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ದೇವದುರ್ಗ ರವರ ನ್ಯಾಯಾಲಯ,
ದೇವದುರ್ಗ.

ಸಿ ಸಿ ನಂ.501/2025

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೊಲೀಸ ಠಾಣೆ, ಜಾಲಹಳ್ಳಿ

- ವಿರುದ್ಧ -

ಆರೋಪಿಃ 1. ಖಾಸಿಂ @ ಖಾಸಿಂಸಾಬ ತಂದೆ ಮಹಿಬೂಬ ಸಾಬ್,
ವಯಸ್ಸು: 28 ವರ್ಷಗಳು, ಉಃ ಚಾಲಕ,
ಸಾಃ ಕಕ್ಕೆರ ಅಗಸೆ ಗುರಗುಂಟ ಗ್ರಾಮ, ತಾಃ ಲಿಂಗಸ್ಗೂರು.

2. ಬಸವರಾಜ ತಂದೆ ದುರುಗಪ್ಪ, ವಯಸ್ಸು: 22 ವರ್ಷಗಳು,
ಉಃ ಚಾಲಕ, ಸಾಃ ತಿಂಥಣಿ ಬ್ರೀಡ್ಜ್, ತಾಃ ದೇವದುರ್ಗ.

4. ಶಿವರಾಜ ತಂದೆ ಅಮರಪ್ಪ, ವಯಸ್ಸು: 36 ವರ್ಷಗಳು,
ಉಃ ಕೂಲಿಕೆಲಸ, ಸಾಃ ಬಂಡೋಳಿ, ತಾಃ ಸುರಪುರ.

## ದೋಷಾರೋಪಣೆ

ನಾನು ಸುರೇಶ ಅಣ್ಣಪ್ಪ ಸವದಿ, ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ, ಈ ಮೂಲಕ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕ 05.04.2025 ರಂದು ಬೆಳಿಗ್ಗೆ 06.25 ಗಂಟೆ ಸುಮಾರಿಗೆ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಜಾಲಹಳ್ಳಿ ಪೋಲಿಸ್ ಠಾಣಾ ಸರಹದ್ದು, ಜಾಲಹಳ್ಳಿ-ತಿಂಥಣಿ ಬ್ರಿಡ್ಜ್ ಮುಖ್ಯ ರಸ್ತೆಯ ಮೇಲೆ ಜಾಲಹಳ್ಳಿ ಕಡೆಯಿಂದ ತಿಂಥಿಣಿ ಬ್ರಿಡ್ಜ್ ಕಡೆಗೆ 1 ನೇ ಆರೋಪಿತರಾದ ನೀವು ನಿಮ್ಮ ವಶದಲ್ಲಿದ್ದ ಗೂಡ್ಸ್ ಆಟೋ ನಂ.ಕೆ.ಎ-36 ಬಿ-7094 ನೇದ್ದನ್ನು ನಡೆಸಿಕೊಂಡು ಹೋಗುವಾಗ ಯರಗುಡ್ಡ ಗ್ರಾಮದ ವಾಲ್ಮೀಕಿ ವೃತ್ತದ ಹತ್ತಿರ ಮುಖ್ಯ ರಸ್ತೆಯಲ್ಲಿ ತನ್ನ ಎದುರಿಗೆ ತಿಂಥಣಿ ಬ್ರಿಡ್ಜ್ ಕಡೆಯಿಂದ 2 ನೇ ಆರೋಪಿತನು ನಡೆಸಿಕೊಂಡು ಬರುತ್ತಿದ್ದ ಪ್ಯಾಸೆಂಜರ್ ಆಟೋ ನಂ.ಕೆ.ಎ-33/9718 ನೇದ್ದಕ್ಕೆ ಅಪಘಾತ ಪಡಿಸಿದ್ದರಿಂದ 1 ಮತ್ತು 2 ನೇ ಆರೋಪಿತರಿಗೆ ಸಾದಾ ಸ್ವರೂಪದ ಗಾಯಗಳಾಗಿದ್ದು, ಪ್ಯಾಸೆಂಜರ್ ಆಟೋ ನಂ.ಕೆ.ಎ-33/9718 ನೇದ್ದರಲ್ಲಿ ಕುಳಿತಿದ್ದ ಸಾಕ್ಷಿ-1, 8 ರಿಂದ

12 ರವರಿಗೆ ಭಾರಿ ಮತ್ತು ಸಾಧಾ ಸ್ವರೂಪದ ಗಾಯಗಳಾಗಿದ್ದು, ಸಾಕ್ಷಿ–10 ರವರ ಮಗಳು ಮಯೂರಿ 03 ವರ್ಷ ಈಕೆಗೆ ಭಾರಿ ಸ್ವರೂಪದ ಗಾಯವಾಗಿದ್ದು ಮತ್ತು ಸಾಕ್ಷಿ–10 ರವರ ಮಗ ಮಲ್ಲಯ್ಯ 02 ವರ್ಷ ಈತನಿಗೆ ಭಾರಿ ಮತ್ತು ಸಾದಾ ಸ್ವರೂಪದ ಗಾಯವಾಗಿದ್ದು ಸಾಕ್ಷಿ–1 ರವರ ಗಂಡ ಮಾನಶಯ್ಯ ಈತನಿಗೆ ಎಡ ತಲೆಗೆ ಭಾರಿ ರಕ್ತ ಗಾಯವಾಗಿದ್ದು, ಎಡ ಮೆಲಕಿಗೆ, ಎಡ ಕಪಾಳಕ್ಕೆ, ಎಡ ಕಿವಿಯ ಹತ್ತಿರ, ಎದೆ, ಬಲಗೈ ತೋಳಿನ ಮೇಲೆ, ಬಲಗೈ ಬೆರಳುಗಳ ಮೇಲೆ, ಎಡಗೈ ತೋಳಿನ ಮೇಲೆ, ಮತ್ತು ಬಲ ಬುಜದ ಮೇಲೆ, ಎರಡು ಕಾಲಿನ ಮೊಣಕಾಲು ಮತ್ತು ತೊಡೆಯ ಮೇಲೆ, ಎಡಗಾಲಿನ ಮುಂಗಾಲಿನ ಮೇಲೆ, ಬೆನ್ನು ಮತ್ತು ಸೊಂಟದ ಹತ್ತಿರ ತರಚಿದ ಗಾಯಗಳಾಗಿದ್ದು ಚಿಕಿತ್ಸೆ ಕುರಿತು ಮಾನಶಯ್ಯನನ್ನು ಆಂಬುಲೆನ್ಸ್‌ನಲ್ಲಿ ರಾಯಚೂರಿಗೆ ಕರೆದುಕೊಂಡು ಹೋಗುವಾಗ ಮಸರಕಲ್ ದಾಟಿದ ನಂತರ ಮಾರ್ಗ ಮಧ್ಯದಲ್ಲಿ ಬೆಳಿಗ್ಗೆ 8–45 ಗಂಟೆಗೆ ಮೃತ ಪಟ್ಟಿರುತ್ತಾನೆ. 1 ನೇ ಆರೋಪಿತರಾದ ನೀವು ಸೂಕ್ತ ಚಾಲನಾ ಪರವಾನಿಗೆಯನ್ನು ಹೊಂದದೆ ಅತಿವೇಗ ಮತ್ತು ಅಲಕ್ಷ್ಯತನದಿಂದ ವಾಹನವನ್ನು ಚಲಾಯಿಸಿದ್ದು 2 ನೇ ಆರೋಪಿತರಾದ ನೀವು ಸೂಕ್ತ ಚಾಲಕನಾ ಪರವಾನಿಗೆಯನ್ನು ಹೊಂದದೆ ತನ್ನ ವಾಹನದಲ್ಲಿ ಮಿತಿಗಿಂತ ಹೆಚ್ಚಿನ ಪ್ರಯಾಣಿಕರನ್ನು ಕೂಡಿಸಿಕೊಂಡು ವಾಹನವನ್ನು ಚಲಾಯಿಸಿದ್ದು, 4 ನೇ ಆರೋಪಿತರಾದ ನೀವು ನಿಮ್ಮ ವಾಹನಕ್ಕೆ ವಿಮೆ ಮಾಡಿಸದೆ ಮತ್ತು ಸೂಕ್ತ ಚಾಲನಾ ಪರವಾನಿಗೆ ಹೊಂದಿರದ 2 ನೇ ಆರೋಪಿತನಿಗೆ ನಿಮ್ಮ ವಾಹನವನ್ನು ಚಲಾಯಿಸಲು ಅನುಮತಿಯನ್ನು ನೀಡಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.281, 125(ಎ), 125(ಬಿ) ಹಾಗೂ 106 ಹಾಗೂ 181, 177, 180 ಮತ್ತು 196 ಮೋಟಾರು ವಾಹನ ಕಾಯ್ದೆ ಅಡಿಯಲ್ಲಿ ಅಪರಾಧ ಮಾಡಿರುವಿರಿ.

ಸದರಿ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರೀ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ಆರೋಪಣೆಯನ್ನು ಈ ದಿನ ದಿನಾಂಕಃ 19.05.2026 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆವರ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ
ದೇವದುರ್ಗ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ದೇವದುರ್ಗ ರವರ ನ್ಯಾಯಾಲಯ,
ದೇವದುರ್ಗ.

ಸಿ ಸಿ ನಂ.501/2025

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೊಲೀಸ ಠಾಣೆ, ಜಾಲಹಳ್ಳಿ

- ವಿರುದ್ಧ -

ಆರೋಪಿಃ 1. ಖಾಸಿಂ @ ಖಾಸಿಂಸಾಬ ತಂದೆ ಮಹಿಬೂಬ ಸಾಬ್,

2. ಬಸವರಾಜ ತಂದೆ ದುರುಗಪ್ಪ,

4. ಶಿವರಾಜ ತಂದೆ ಅಮರಪ್ಪ,

1. ನಿಮಗೆ ಓದಿ ಹೇಳಿದ ದೋಷಾರೋಪಣೆಗಳು ಅರ್ಥವಾಯಿತೇ ?

ಆರೋಪಿ ಉತ್ತರಃ

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ ?

ಆರೋಪಿ ಉತ್ತರಃ

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ಓದಿ ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢಿಕರಿಸಿರುತ್ತೇನೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ದೇವದುರ್ಗ.